**ಸಿಸಿ ಃ 735/2021**

**ಚಾಸಾ –10**

**ಪ್ರಾಸಾ –7**

**ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ**

**ಸಿಸಿ ಃ 735/2021**

ಸಾಕ್ಷಿದಾರರ ಹೆಸರುಃ ಕಿರಣ್
ತಂದೆ/ಗಂಡ ಹೆಸರುಃ ಲಿಂಗರಾಜು
ವಯಸ್ಸುಃ 36
ವೃತ್ತಿಃ ಕೃಷಿ
ವಾಸಸ್ಥಳಃ ಗಣಗೂರು ಗ್ರಾಮ ಸೋಮವಾರಪೇಟೆ.
ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 03-07-2024

ಮುಖ್ಯ ವಿಚಾರಣೆಃ ಎಪಿಪಿಯವರಿಂದ

ನನಗೆ ಚಾಸಾ 1 ಗೊತ್ತಿಲ್ಲ, ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ, ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**(ಸಾಕ್ಷಿಯು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುತ್ತಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿಯವರು ಪಾಟಿ ಸವಾಲು ನಡೆಸಲು ಅನುಮತಿ ಕೋರಿರುತ್ತಾರೆ. ಅನುಮತಿಸಿದೆ.)**

ಪಾಟಿ ಸವಾಲುಃ ಎಪಿಪಿಯವರಿಂದ

ದಿಃ 25-05-2021 ರಂದು ಸಂಜೆ 6.45 ಗಂಟೆಗೆ ನಾನು ಮತ್ತು ವಿನೋಧ, ನಮ್ಮ ಹುಡುಗರು ಇದ್ದಾಗ ಒಂದು ಗೂಡ್ಸ್ ಆಟೋವನ್ನು ಅದರ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಗೋಣಿಮರೂರು ಕಡೆಯಿಂದ ಬರುತ್ತಿದ್ದ ಒಂದು ಪ್ಯಾಸೆಂಜರ್ ಆಟೋಗೆ ಗಣಗೂರು ಪ್ರಾಥಮಿಕ ಶಾಲೆಯ ಮುಂದಿನ ರಸ್ತೆಯಲ್ಲಿ ಡಿಕ್ಕಿಪಡಿಸಿರುತ್ತಾರೆ. ತಕ್ಷಣ ನಾನು ಮತ್ತು ಇತರರು ಸ್ಥಳಕ್ಕೆ ಹೋಗಿ ನೋಡಲಾಗಿ ಆಟೋದಲ್ಲಿ ಹಿಂದಿನ ಸೀಟಿನ ಬಲಭಾಗ ಕುಳಿತಿದ್ದ ಭುವನ್ ಎಂಬ ಹುಡುಗನ ಬಲಗೈ ಮೂಳೆ ಮುರಿದು ಮಾತನಾಡುತ್ತಿರಲಿಲ್ಲ, ಆತನ ಪಕ್ಕದಲ್ಲಿದ್ದ ಜಯಮ್ಮ ರವರಿಗೂ ಸಣ್ಣ ಪುಟ್ಟ ಗಾಯಗಳು ಆಗಿದ್ದವು, ಸದರಿ ಆಟೋ ನೊಂದಣಿ ನಂ. ಕೆಎ.12.9257 ಆಗಿತ್ತು

**ಸಿಸಿ ಃ 735/2021**

**ಚಾಸಾ –10**

**ಪ್ರಾಸಾ –7**

ಅದರ ಚಾಲಕ ವಿಶ್ವನಾಥ್ ಎಂದು ತಿಳಿಯಿತು. ಪ್ಯಾಸೆಂರ್ ಆಟೋ ನಂ. ಕೆಎ.12.ಎ.8880 ಆಗಿದ್ದು ಅದರ ಚಾಲಕ ಈಶ್ವರ ಎಂದು ತಿಳಿದು ಬಂದಿರುತ್ತದೆ. ಆ ನಂತರ ಈ ಬಗ್ಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 4 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟಿ ಸವಾಲುಃ ಹೆಚ್.ಈ.ಪಿ ವಕೀಲರಿಂದ

ಇಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

ಸಹಿ/-

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ